ಎಂದು ಹೇಳಿ ಉಸಿರುಕಟ್ಟಿ ಓಡಿದೆ. ಅಲ್ಲೇ ನಿಂತು ಕಬಾಬ್ ತಿನ್ನುವವರಿಗೆ ಅಂತಲೇ ಇಟ್ಟಿದ್ದ ಪ್ಲಾಸ್ಟಿಕ್ಕಿನ ನೀರಿನ ಜಗ್ಗನ್ನು ಅನಾಮತ್ತಾಗಿ ಎತ್ತಿಕೊಂಡು ಓಡೋಡಿ ಬಂದೆ. ಹಿಂತಿರುಗಿ ಬಂದಾಗ ದೊಡ್ಡ ಗಂಡಾಂತರವೇ ಕಾದಿತ್ತು. ನಾ ಬಿಟ್ಟು ಹೋದ ಆ ಜಾಗದಲ್ಲಿ ಮಗಳು ಸೂಫಿ ಇರಲೇ ಇಲ್ಲ.

ರಕ್ತ ಸಂಚಾರವೇ ನಿಂತಂತಾಗಿ ಉಸಿರಾಟದ ಸ್ವರೂಪವೇ ಬದಲಾಯಿತು. ಮೈಮೇಲೆ ಮುಳ್ಳುಗಳೆದ್ದವು. "ಸೂಫಿ, ಸೂಫಿ, ನಿಶೂಪುಟ್ಟೀ" ಎಂದು ಎತ್ತ ಕರೆದರೂ ಮರುದನಿಯಿಲ್ಲ. ವಿಚಾರಿಸಲು ಅದು ಜನರಿಲ್ಲದ ನಿರ್ಜನ ಪ್ರದೇಶ. ಆಗ ನನ್ನ ಜಂಘಾಬಲವೇ ಉಡುಗಿ ಹೋಯಿತು. ಹೆದರಿ ಕೈಕಾಲು ನಡುಗತೊಡಗಿದವು. ದಿಕ್ಕುತೋಚದಂತಾಯಿತು. "ಛೇ, ಒಂಟಿ ಮಗುವನ್ನು ಕತ್ತಲಲ್ಲಿ ಬಿಟ್ಟು ಹೋದೆನಲ್ಲ ನಾನೆಂಥ ಮೂರ್ಖ ಮನುಷ್ಯ" ಎಂದು ನನಗೆ ನಾನೇ ನಿಂದಿಸಿಕೊಂಡೆ. ಗಾಬರಿ ಬಿದ್ದ ಮನುಷ್ಯನ ವಿವೇಕ ತಕ್ಷಣಕ್ಕೆ ಕೆಲಸ ಮಾಡುವುದಿಲ್ಲ. ಬುದ್ಧಿಹೀನನಂತೆ ನಿಂತುಬಿಟ್ಟೆ.

ಅದೊಂದು ದೊಡ್ಡ ಮೈದಾನ. ಕತ್ತಲೆ ಆವರಿಸಿದ್ದ ಅದರೊಳಗೆ ಆಕೆ ಹೋಗಿರುವುದು ಸುತಾರಾಂ ಸಾಧ್ಯವಿಲ್ಲ. ಯಾರಾದರೂ ಅಚಾನಕ್ಕಾಗಿ ಕಾದಿದ್ದು ಅವಳ ಎತ್ತಿಕೊಂಡು ಓಡಿ ಹೋದರೋ? ಆಗ ಆಕೆ ಏನಾದರೂ ಅರಚಿಕೊಂಡಳೋ? ಅದು ನನಗೆ ಕೇಳಿಸಲಿಲ್ಲವೋ? ನಾಯಿಗೀಯಿಗಳು ಏನಾದರೂ ಬಂದು ಕಚ್ಚಿ ಎಳೆದೊಯ್ದುವೋ? ಇಲ್ಲ ನನ್ನ ಹಿಂದೆಯೇ ಏನಾದರೂ ಓಡೋಡಿ ಬಂದು ಬಿಟ್ಟಳೋ? ಹೀಗೂ ಆಗಿರಬಹುದು. ಇರಲಿ ನೋಡೋಣವೆಂದು ಅದೇ ಕಬಾಬ್ ಕಾರ್ನರ್ ಕಡೆಗೆ ಓಡಿದೆ. ಬಂದು ನೋಡಿದರೆ ಅಲ್ಲೂ ಪತ್ತೆಯಿಲ್ಲ. ಅಲ್ಲಿ ಯಾರಿಗೇ ಕೇಳಿದರೂ ಗೊತ್ತಿಲ್ಲ ಎನ್ನುವವರೆ. ಅಯ್ಯೋ ನನ್ನ ಕಂದ ಎತ್ತ ಹೋದೆಯೇ? ಎಂದು ತಲೆಮೇಲೆ ಕೈ ಹೊತ್ತೆ. ಕಣ್ಣಲ್ಲಿ ದಬದಬ ನೀರು ಸುರಿಯಹತ್ತಿತು.

ಮಗು ಕತ್ತಲ ಮೈದಾನದಲ್ಲಿ ದಾರಿ ಹುಡುಕುತ್ತಿರಬಹುದೇ? ಇರಬಹುದೆಂದು ಗಾಡಿ ಸ್ಟಾರ್ಟ್ ಮಾಡಿಕೊಂಡು ಮೈದಾನದ ಮೂಲೆಮೂಲೆ ಜಾಲಾಡಿದೆ. ಆಕೆ ಮಾತ್ರ ಸಿಗಲಿಲ್ಲ. ಬದಲಿಯಾಗಿ ಕತ್ತಲ ಮೈದಾನದಲ್ಲಿ ಸಿಕ್ಕವರೇ ಬೇರೆ. ಎಣ್ಣೆಹೊಡೆಯುತ್ತಾ ಕಬಾಬ್ ಸೀಪುತ್ತಿದ್ದ ಹುಡುಗರ ಗುಂಪು. ಕತ್ತಲ ಛಾಯಿದೆ ಎತ್ತುವ ಹಳೆ ಮತ್ತು ಹೊಸ ಜೋಡಿಗಳು. ಗುಮಾನಿಯಲ್ಲಿ ಓಡಾಡುತ್ತಿದ್ದ ಅದೆಷ್ಟೋ ಬೇನಾಮಿ ಜನ ಅಲ್ಲಿ ಕಂಡರು. ಕತ್ತಲೆ ಭಾಗ್ಯ ಬಯಸಿ ಬಂದ ಅವರಿಗೆ ನನ್ನ ಬೈಕಿನ ಲೈಟು ಕುಕ್ಕಿ ಸಿಟ್ಟೇ ಸಿಡಿದು ಬಂತು. "ಯಾವನ್ಲೆ ಅವನು ಅಡ್ಡ ಕಸುಬಿ ನನ್ಮಗ ಈ ರಾತ್ರೀಲಿ ಬೈಕ್ ಕಲಿಯೋನು" ಎಂದು ಉಗಿದರು. ಖಾಸಗಿತನಕ್ಕೆ ಧಕ್ಕೆಯಾದ ಕೆಲ ಜೋಡಿಗಳು ಕಿವಿತೂತು ಬೀಳುವ ಸೌಮ್ಯ ಭಾಷೆಯಲ್ಲಿ ಹರಸಿದರು. ಅಲ್ಲಿರುವ ಯಾವ ವ್ಯಕ್ತಿಯೂ ಮಾತಾಡುವ ಸ್ಥಿತಿಯಲ್ಲಿ ಇರಲಿಲ್ಲ. ಅವರವರ ಕಾಯಂ ಕೆಲಸದಲ್ಲಿ ಅವರು ತಲ್ಲೀನರಾಗಿದ್ದರು. ಆಗ ನನಗೆ ಗೊತ್ತಾಗಿದ್ದು, ಓಹೋ! ಮೈದಾನ ಎಂಬ ಶಬ್ದ ಹೀಗೆ ಜನಿಸಿದೆ ಎಂದು. ಪದವ ಬಿಡಿಸಿದರೆ ಅರ್ಥ ಇದೆಯಲ್ಲ ಎಂದೆನಿಸಿ ಸೋಜಿಗವಾಯಿತು. ಸಂಕಟದ ಹೊತ್ತಲ್ಲೂ ಕನ್ನಡ ಮೇಷ್ಟ್ರು ತರಲೆ ಬುದ್ಧಿ ನಿಲ್ಲುತ್ತಿಲ್ಲವೇ?

ಕೊನೆಗೆ ಮನೆಗೇನಾದರೂ ತಲುಪಿರಬಹುದೇ ಎಂದು, "ಪಾಪು ಏನಾದರೂ ಬಂತೇ" ಎಂದು ಫೋನ್ ಮಾಡಿ ಕೇಳಿದೆ. ಸೂಫಿ ತಪ್ಪಿಸಿಕೊಂಡ ಜಾಗದಿಂದ ಮನೆ ಐದಾರು ಕೇರಿ ಆಚೆಗಿತ್ತು. ಆದರೆ ಅಷ್ಟು ಚಿಕ್ಕ ಹುಡುಗಿ ತಾನೇ ಮನೆದಾರಿ ಹುಡುಕಿಕೊಂಡು ಹೋಗಲು ಸಾಧ್ಯವೇ ಇರಲಿಲ್ಲ. ಅಷ್ಟು ಅಸಡಾ ಬಸಡಾ ಏರಿಯಾ ನಮ್ಮದು. ಈಗಲೂ ಮನೆಗೆ ಅಡ್ರೆಸ್ ಹುಡುಕಿ ಬರುವವರಿಗೆ ದಾರಿ ಹೇಳುವುದು ಹರಸಾಹಸ ಎನಿಸುತ್ತೆ. ಅಂತದ್ದರಲ್ಲಿ ಪಾಪ ಮಗು ತಾನಾಗೇ ಹುಡುಕಿ ಬರುವುದು ಖಂಡಿತಾ ಆಗದ ಕೆಲಸ.

ಆಕಡೆಯಿಂದ ಜೋರಾಗಿ ಕೂಗುತ್ತಿದ್ದ ಹೆಂಡತಿ, "ಏನಾಯಿತು ಮಗುವಿಗೆ? ನೀವೆಲ್ಲಿದ್ದೀರಿ? ಜೊತೆಗೆ ಕರೆದುಕೊಂಡು ಹೋಗಿ ಈಗೆಲ್ಲಿ ಅಂತ ನನ್ನನ್ನೇ ವಿಚಾರಿಸುತ್ತಿದ್ದೀರಲ್ಲ, ಏನಾಯಿತು